1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2409/2015

ಚಾಸಾ:6 ಪ್ರಾಸಾ:6

ದಿನಾಂಕ: 31.01.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ರಾಧ |
| ಗಂಡನ ಹೆಸರು | : | ಶಿವ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿತರ ಪರಿಚಯವಿದೆ. ದಿ: 10-02-2015ರ ಬೆಳಗ್ಗೆ 10ಗಂಟೆ ಸಮಯದಲ್ಲಿ ಚಾಸಾ-1 ರವರು ಅಂಗಡಿಗೆ ಹೋಗಿ ಬರುತ್ತಿದ್ದಾಗ ಆರೋಪಿತರು ಆಕೆಯನ್ನು ಉದ್ದೇಶಿಸಿ ಅವಾಚ್ಯವಾಗಿ ನಿಂಧಿಸುತ್ತಿದ್ದಾಗ ಚಾಸಾ-2 ಮತ್ತು 3 ರವರು ಬಂದಿದ್ದು, ಆ ವೇಳೆಗೆ ಚಾಸಾ-4 ರವರು ತಮ್ಮ ಜಾಗದಲ್ಲಿ ಇದ್ದು, ಮೊದಲಿಗೆ ಆರೋಪಿತರು ಎಲ್ಲರಿಗೂ ಹಲ್ಲೆ ಮಾಡಿ ಅವಾಚ್ಯವಾಗಿ ನಿಂಧಿಸಿ ಚಾಸಾ-2 ರವರು ಧರಿಸಿದ್ದ ನೈಟಿಯನ್ನು ಹರಿದು, ಚಾಸಾ-4 ರವರ ದವಡೆಯ ಭಾಗಕ್ಕೆ ಹೊಡೆದು ಅವರನ್ನು ಉದ್ದೇಶಿಸಿ ನಿಂಧಿಸಿ ಜೀವ ಬೆದರಿಕೆ ಹಾಕಿರುತ್ತಾರೆ. ಅನಂತರ ಅವರೆಲ್ಲರನ್ನೂ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಆ ವೇಳೆಯಲ್ಲಿ ಗದ್ದೆಗೆ ಹೋಗುತ್ತಿದ್ದು ಗಲಾಟೆಯನ್ನು ನೋಡಿರುತ್ತೇನೆ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಮುಮಾ1ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದ:**

ಈ ಘಟನೆಯಿಂದ ನನಗೆ ಯಾವುದೇ ಪೆಟ್ಟು ಆಗಿಲ್ಲ. ನಮ್ಮ ಎರಡೂ ಪಕ್ಷದವರ ನಡುವೆ ದಾರಿ ವಿಚಾರದಲ್ಲಿ ತಗಾಧೆ ಇರುತ್ತದೆ. ಸುಮಾರು 12 ವರ್ಷಗಳಿಂದ ಈ ವಿಚಾರದಲ್ಲಿ ತಗಾಧೆ ಇರುತ್ತದೆ. ನಮ್ಮ ಪಕ್ಷದವರು ಆರೋಪಿತರ ವಿರುದ್ಧ ಆಗಾಗ ಪ್ರಕರಣಗಳನ್ನು ದಾಖಲಿಸುತ್ತಾರೆ ಎಂದರೆ ಸರಿ. ಅದೇ ರೀತಿ ನಮ್ಮ ವಿರುದ್ಧ ಪ್ರಕರಣಗಳು ದಾಖಲಾಗಿದೆ ಎಂದರೆ ಸರಿ. ಜಾಗದ ಸರ್ವೆ ನಂಬ್ರ ವಿಸ್ತೀರ್ಣ ಹಾಗೂ ಮಾಲೀಕತ್ವದ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿತರು ಸದ್ರಿ ಜಾಗ ಅವರದ್ದು ಎಂದು ಹೇಳುತ್ತಿದ್ದಾರೆ ಎಂದರೆ ಸರಿ. ಆರೋಪಿತರ ಮನೆಯನ್ನು ದಾಟಿ ನಮ್ಮ ಮನೆಗೆ ಹೋಗಬೇಕು.

ನಾನು ಹೋದಾಗ ಚಾಸಾ-4 ರವರು ಬಿದ್ದಿದ್ದರು. ಚಾಸಾ-4 ರವರ ಮನೆ ಅಲ್ಲಿ ಇಲ್ಲ. ಚಾಸಾ-1 ರವರನ್ನು ದೂಡಿರುತ್ತಾರೆ. ಚಾಸಾ4 ರವರ ಮೇಲೆ ಆಯುಧ ಪ್ರಯೋಗಿಸಿಲ್ಲ. ನಾನು ಆಸ್ಪತ್ರೆಗೆ ಮತ್ತು ಠಾಣೆಗೆ ಚಾಸಾ-1 ರವರೊಂದಿಗೆ ಹೋಗಿಲ್ಲ. ಚಾಸಾ-1 ಅಥವಾ 4 ರವರಿಗೆ ರಕ್ತ ಗಾಯವಾಗಿಲ್ಲ. ಚಾಸಾ-4 ರವರ ವಾಸದ ಮನೆಯನ್ನು ನಾನು ನೋಡಿಲ್ಲ. ಘಟನೆಯನ್ನು ನೋಡಿದಾಗ ನನಗೆ 60 ವರ್ಷ. ಅಪಾದಿಸಿರುವ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಉಪದ್ರವ ನೀಡಿರುತ್ತಾರೆ.

ಈ ಘಟನೆಯಾದ ಎಷ್ಟು ದಿನಗಳ ನಂತರ ನಾನು ಠಾಣೆಗೆ ಹೋಗಿ ಹೇಳಿಕೆ ನೀಡಿದ್ದೇನೆ ಎಂದು ನೆನಪಿಲ್ಲ. ಮೇಲೆ ಅಪಾದಿಸಿರುವ ಯಾವುದೇ ಕೃತ್ಯವನ್ನು ಆರೋಪಿತರು ಎಸಗದಿದ್ದರೂ ಅವರ ಮೇಲೆನ ದ್ವೇಷದಿಂದ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-1 ಮತ್ತು 4 ರವರಿಗೆ ಆರೋಪಿತರು ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಸೇರಿ ಆರೋಪಿತರ ವಿರುದ್ಧ ಆಗಾಗ ಪ್ರಕರಣಗಳನ್ನು ದಾಖಲಿಸುತ್ತಿದ್ದು ಆ ಪೈಕಿ ಇದು ಒಂದು ಸುಳ್ಳು ಪ್ರಕರಣವಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**